# ಅಮ್ಮ ದೇವತೆ ಎದೆಹಾಲು ಅಮೃತ



ಚಿತ್ರ: ಎಸ್.ಕೆ. ದಿನೇಶ್

**ಕೆಲವು ಕಂದಮ್ಮಗಳು ಬೇರೆ ಬೇರೆ ಕಾರಣಗಳಿಂದ ಎದೆಹಾಲಿನಿಂದ ವಂಚಿತವಾಗುತ್ತವೆ. ಅಂಥ ಮಕ್ಕಳಿಗೆ 'ಎದೆಹಾಲು ಬ್ಯಾಂಕ್' ವರದಾನ. ಹುಟ್ಟಿದ ಮಗುವಿಗೆ ಕನಿಷ್ಠ ಆರು ತಿಂಗಳವರೆಗೆ ಎದೆಹಾಲು ಕುಡಿಸಲೇಬೇಕು.**

■ **ಉಮಾ ಅನಂತ್**

ಇಪ್ಪತ್ತೈದು ವರ್ಷದ ಚಂದ್ರಿಕಾಗೆ ಸಹಜ ಹೆರಿಗೆಯೇ ಆದರೂ ಎದೆಗೆ ಹಾಲು ಬಿದ್ದಿರಲಿಲ್ಲ. ತಾಯಿಯ ಗರ್ಭದಲ್ಲಿ ಬೆಚ್ಚಗಿದ್ದ ಮಗು ಹೊರಗಿನ ಜಗತ್ತಿಗೆ ಕಾಲಿಟ್ಟ ಕೂಡಲೇ ಎಲ್ಲ ನವಜಾತ ಶಿಶುಗಳಂತೆ ಒಂದೇ ಸಮನೆ ಅಳುತ್ತಿತ್ತು. ದಾದಿಯರು ಬಂದು ಎದೆಹಾಲು ಕುಡಿಸುವಂತೆ ಚಂದ್ರಿಕಾಗೆ ಹೇಳುತ್ತಿದ್ದರು. ಹಾಲು ಬಂದರೆ ತಾನೇ ಕುಡಿಸೋದು? ಮಗುವಿನ ಅಳು ಮುಗಿಲು ಮುಟ್ಟಿದಾಗ ದಾದಿಯರು ದಾನಿಗಳಿಂದ ಸಂಗ್ರಹಿಸಿದ ಎದೆಹಾಲನ್ನೇ ಮಗುವಿಗೆ ಕುಡಿಸಿದರು. ಮಗು ತೃಪ್ತಿಯಿಂದ ನಿದ್ದೆಹೋಯಿತು.

ಮೀನಾಳ ಕಥೆ ಇದಕ್ಕಿಂತ ಕೊಂಚ ಭಿನ್ನ. ಈಕೆಗೆ ಮಗು ಅವಧಿಪೂರ್ವವಾಗಿ ಜನಿಸಿಬಿಟ್ಟಿತ್ತು. ಪೌಷ್ಟಿಕಾಂಶದ ಕೊರತೆಯಿಂದ ಮಗುವನ್ನು ತುರ್ತುಚಿಕಿತ್ಸಾ ಘಟಕದೊಳಗಿರಿಸಿ ಚಿಕಿತ್ಸೆ ನೀಡಬೇಕಿತ್ತು. ಈ ಸಂದರ್ಭದಲ್ಲಿ ಮಗುವಿನ ನೆರವಿಗೆ ಬಂದದ್ದು ದಾನಿಗಳು ನೀಡಿದ ಎದೆಹಾಲೇ.

ದೂರದ ಹಳ್ಳಿಯೊಂದರಿಂದ ಹೆರಿಗೆಗಾಗಿ ಬಂದ ಮಹಿಳೆಗೆ ಅವಳಿ ಮಕ್ಕಳು. ಅದೂ ಎಂಟನೇ ತಿಂಗಳಿನಲ್ಲೇ. ಈಕೆಯಲ್ಲಿ ಉತ್ಪತ್ತಿಯಾಗುವ ಎದೆಹಾಲು ಒಂದು ಮಗುವಿಗಷ್ಟೇ ಸಾಕಾಗುತ್ತಿತ್ತು. ಅವಧಿಪೂರ್ವ ಮಕ್ಕಳು ಜನಿಸಿದ ಕಾರಣ ಎರಡೂ ಶಿಶುಗಳಿಗೆ ಹಾಲಿನ ಕೊರತೆ ಎದುರಾಗಿತ್ತು. ಆಗ ಆಸ್ಪತ್ರೆ ಸಿಬ್ಬಂದಿ ಎದೆಹಾಲು ಬ್ಯಾಂಕಿನಿಂದ ಹಾಲು ಕುಡಿಸಬೇಕಾದ ಅನಿವಾರ್ಯತೆ ಎದುರಾಯಿತು.

ಬೆಂಗಳೂರಿನ ವಾಣಿ ವಿಲಾಸ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ನಿತ್ಯವೂ ಇಂಥದ್ದೇ ಒಂದಲ್ಲ ಒಂದು ಘಟನೆ ನಡೆಯುತ್ತಲೇ ಇರುತ್ತದೆ. ಕೆಲವೊಮ್ಮೆ ಹುಟ್ಟಿದ ಶಿಶು ಅಪೌಷ್ಟಿಕತೆಯಿಂದಲೋ ಅಥವಾ ಇನ್ನಾವುದೋ ತೊಂದರೆಯಿಂದಲೋ ಎನ್‌ಐಸಿಯು ದಾಖಲಾಗಿರುತ್ತದೆ. ಈ ಸಂದರ್ಭದಲ್ಲಿ ಮಗುವಿಗೆ ಎದೆಹಾಲಿನ ಅವಶ್ಯಕತೆ ಇರುತ್ತದೆ. ಆಗಲೂ ಎದೆಹಾಲು ಬ್ಯಾಂಕಲ್ಲಿ ಸಂಗ್ರಹಿಸಿದ್ದ ಹಾಲು ಬಳಕೆಗೆ ಬರುತ್ತದೆ.



ಡಾ. ಸವಿತಾ
ಬೆಂಗಳೂರಿನ ವಾಣಿ ವಿಲಾಸ
ಆಸ್ಪತ್ರೆಯ ವೈದ್ಯಕೀಯ ಸೂಪರಿಟೆಂಡೆಂಟ್

'ಹುಟ್ಟಿದ ಮಗುವಿಗೆ ಎದೆಹಾಲೇ ಅಮೃತ. ಮಗು ಆರು ತಿಂಗಳವರೆಗೆ ಎದೆಹಾಲು ಬಿಟ್ಟು ಬೇರೆ ಯಾವುದೇ ಆಹಾರ ಸೇವಿಸಬಾರದು. ಎಲ್ಲ ತಾಯಂದಿರಿಗೆ ಎದೆಹಾಲು ಬರುವುದಿಲ್ಲ. ಹೀಗಾಗಿ ಮಕ್ಕಳು ಪೌಷ್ಟಿಕ ಹಾಲಿನಿಂದ ವಂಚಿತವಾಗುತ್ತವೆ. ಇದಕ್ಕೆ ವಿರುದ್ಧವಾಗಿ ಕೆಲ ತಾಯಂದಿರಿಗೆ ಎದೆಹಾಲು ಹೆಚ್ಚಿರುತ್ತದೆ. ತಮ್ಮ ಮಕ್ಕಳಿಗೆ ಹೊಟ್ಟೆತುಂಬ ಕುಡಿಸಿದ ಬಳಿಕವೂ ಎದೆಹಾಲು ಮಿಕ್ಕಿರುತ್ತದೆ. ಇಂಥವರು ಎದೆಹಾಲನ್ನು ದಾನ ಮಾಡಬಹುದು. ಈ ರೀತಿ ಸಂಗ್ರಹಿಸಿದ ಹಾಲನ್ನು ಆರು ತಿಂಗಳವರೆಗೆ ಇಡಬಹುದು. ಇದನ್ನು ಪ್ಯಾಶ್ಚರೀಕರಿಸಿ ಫ್ರೀಜರ್‌ನಲ್ಲಿ ಇಟ್ಟು ಅಗತ್ಯವಿರುವ ಮಗುವಿಗೆ ನೀಡುತ್ತೇವೆ' ಎಂದು ಹೇಳುತ್ತಾರೆ ಬೆಂಗಳೂರಿನ ವಾಣಿ ವಿಲಾಸ ಆಸ್ಪತ್ರೆಯ ವೈದ್ಯಕೀಯ ಸೂಪರಿಟೆಂಡೆಂಟ್ ಡಾ. ಸವಿತಾ.

'ವಾಣಿ ವಿಲಾಸ ಆಸ್ಪತ್ರೆಯಲ್ಲಿ ಜನಿಸುವ ಮಕ್ಕಳಿಗೆ ಎದೆಹಾಲಿನ ಕೊರತೆ ಆಗಬಾರದು ಎಂಬ ಉದ್ದೇಶದಿಂದ 2021ರಲ್ಲಿ ಎದೆಹಾಲು ಬ್ಯಾಂಕ್ ಆರಂಭಿಸಲಾಯಿತು. ಇದುವರೆಗೆ ಸಾವಿರಾರು ಮಕ್ಕಳು ಇದರ ಪ್ರಯೋಜನ ಪಡೆದಿದ್ದಾರೆ. ಅವಧಿಪೂರ್ವ ಮಕ್ಕಳು, ಕಡಿಮೆ ತೂಕವಿರುವ ಮಕ್ಕಳು, ಅನಾಥ ಮಕ್ಕಳಿಗೆ ಈ ಎದೆಹಾಲು ಬ್ಯಾಂಕ್ ವರದಾನ' ಎಂದು ವಿವರ ನೀಡುತ್ತಾರೆ ಅವರು.